ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

No.JCCT/EIU/CR-15/2019-20

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ,
ಬೆಂಗಳೂರು, ದಿನಾಂಕ: 09/07/2019.

**ವಾಣಿಜ್ಯ ತೆರಿಗೆಗಳ ಆಯುಕ್ತರವರ ಸುತ್ತೋಲೆ ಸಂಖ್ಯೆ: 2/2019–2020**

ವಿಷಯ:– ಇಲಾಖಾ ಅಧಿಕಾರಿಗಳ ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ಸಂವಹನಕ್ಕಾಗಿ ಅಧಿಕೃತ ವಿದ್ಯುನ್ಮಾನ ಮಿಂಚಂಚೆ (official e-Mail) ಮಾತ್ರ ಉಪಯೋಗಿಸುವ ಕುರಿತು ನಿರ್ದೇಶನಗಳು.

– – –

ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಪದ್ಧತಿಯನ್ನು ಜುಲೈ 1, 2017ರಿಂದ ರಾಜ್ಯದಲ್ಲಿ ಜಾರಿ ಮಾಡಿದ್ದು, ಸದರಿ ತೆರಿಗೆ ಪದ್ಧತಿಯಲ್ಲಿ ಎಲ್ಲಾ ಪ್ರಕ್ರಿಯೆಗಳು ವಿದ್ಯುನ್ಮಾನ ವಿಧಾನದಲ್ಲಿ ಕೈಗೊಳ್ಳಲಾಗುತ್ತಿದೆ. ಅಂತಹ ಪ್ರಕ್ರಿಯೆಗಳಲ್ಲಿ ಕರದಾತರಿಗೆ ಸೂಚನಾಪತ್ರ, ತಿಳಿವಳಿಕೆ, ಸಮನ್ಸ್, ಆದೇಶ ಅಥವಾ ಯಾವುದೇ ನಿರ್ಣಯಗಳನ್ನು ಜಾರಿ ಮಾಡುವುದೂ ಆಗಿರುತ್ತದೆ. ಕರ್ನಾಟಕ ಸರಕು ಮತ್ತು ಸೇವಾ ತೆರಿಗೆಯ ಅಧಿನಿಯಮ, 2017ರ ಪ್ರಕರಣ 129ರಲ್ಲಿ ವ್ಯಾಖ್ಯಾನಿಸಿದಂತೆ ಸರಕು ಮತ್ತು ಸೇವಾ ತೆರಿಗೆಯ ಸಾಮಾನ್ಯ ಪೋರ್ಟಲ್‌ನ ಮುಖಾಂತರ ಕರದಾತರಿಗೆ ಇಂತಹ ಯಾವುದೇ ಸೂಚನಾ ಪತ್ರ, ತಿಳಿವಳಿಕೆ, ಸಮನ್ಸ್, ಆದೇಶ, ನಿರ್ಣಯಗಳನ್ನು ಜಾರಿ ಮಾಡುವುದು (ಒದಗಿಸುವುದು) ಕಡ್ಡಾಯವಾಗಿರುತ್ತದೆ. ಆದರೆ ತೆರಿಗೆ ಆಡಳಿತದ ಪ್ರಮುಖ ಪ್ರಕ್ರಿಯೆಗಳಾದ ರಿಟರ್ನ್‌ಗಳ ಕೂಲಂಕಷ ಪರಿಶೀಲನೆ (Scrutiny of returns), ರಿಟರ್ನ್ ಸಲ್ಲಿಸದಿರುವ ಕರದಾತರ ಕರನಿರ್ಧರಣೆ, ನೋಂದಾಯಿತರಲ್ಲದ ಕರದಾತರ ಕರನಿರ್ಧರಣೆ, ಲೆಕ್ಕಪರಿಶೋಧನೆ, ತಗಾದೆ ಸೃಷ್ಟಿಸುವುದು ಮತ್ತು ವಸೂಲಾತಿ ಮುಂತಾದವುಗಳಿಗೆ ಅಗತ್ಯವಾದ ತಂತ್ರಾಂಶದ ವಿನ್ಯಾಸ, ಅಭಿವೃದ್ಧಿ ಮತ್ತು ಸರಕು ಮತ್ತು ಸೇವಾ ತೆರಿಗೆಯ ಸಾಮಾನ್ಯ ಪೋರ್ಟಲ್‌ನೊಂದಿಗೆ ಸಂಯೋಜಿತಗೊಳಿಸುವ ಕಾರ್ಯವು ಇನ್ನೂ ಪ್ರಗತಿಯಲ್ಲಿರುವುದರಿಂದ, ಕರದಾತರಿಗೆ ಈಗ ಕೆಲವೊಂದು ಸೂಚನಾ ಪತ್ರ, ತಿಳಿವಳಿಕೆ, ಸಮನ್ಸ್, ಆದೇಶ, ಯಾವುದೇ ನಿರ್ಣಯಗಳನ್ನು ಸಾಮಾನ್ಯ ಪೋರ್ಟಲ್‌ನ ಮುಖಾಂತರ ಜಾರಿ ಮಾಡುವುದು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಯುಕ್ತ ಅಧಿಕಾರಿಗಳು ಸದರಿ ಅಧಿನಿಯಮದ ಪ್ರಕರಣ 169ರಲ್ಲಿ ವಿವರಿಸಿದಂತೆ ನೋಂದಣಿ ಸಮಯದಲ್ಲಿ ಅಥವಾ ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಕರದಾತರು ಒದಗಿಸಿರುವ ವಿದ್ಯುನ್ಮಾನ ಮಿಂಚೋಲೆಯ ವಿಳಾಸಕ್ಕೆ ಇಂತಹ ಸೂಚನಾ ಪತ್ರ, ತಿಳಿವಳಿಕೆ, ಸಮನ್ಸ್, ಆದೇಶ, ಯಾವುದೇ ನಿರ್ಣಯಗಳನ್ನು ರವಾನಿಸಿ ಜಾರಿ ಮಾಡುವ ಅಗತ್ಯತೆಯಿದೆ. ಈ ರೀತಿಯಾಗಿ ಸಂವಹನವನ್ನು ಕಳುಹಿಸುವಾಗ ಇಲಾಖೆಯ ಅಧಿಕಾರಿಗಳು ಇಲಾಖೆಯಿಂದ ನೀಡಲ್ಪಟ್ಟ ಯುಕ್ತ ಅಧಿಕಾರಿಗಳ ಅಧಿಕೃತ ಇ–ಮೇಲ್ (ಮಿಂಚಂಚೆ) ವಿಳಾಸದಿಂದಲೇ ಕಳುಹಿಸುವುದು ಅವಶ್ಯ ಮಾತ್ರವಲ್ಲದೇ ಅನಿವಾರ್ಯವೂ ಆಗಿದೆ. ಸರ್ಕಾರದಿಂದ ನೀಡಲ್ಪಟ್ಟ ಇ–ಮೇಲ್ (ಮಿಂಚಂಚೆ)ಗಳು ಸುರಕ್ಷಿತ, ಸುಭದ್ರ, ಪರಿಣಾಮಕಾರಿ ಮತ್ತು ದಕ್ಷತೆಯಿಂದ ಸಂವಹನವನ್ನು ಏರ್ಪಡಿಸಲು ವಿಶೇಷವಾದ ಸೇವೆಗಳನ್ನು ಒದಗಿಸುತ್ತಿದೆ. ಅಧಿಕೃತ ಇ–ಮೇಲ್ (ಮಿಂಚಂಚೆ) ಯನ್ನು ಗೂಢಲಿಪಿಯನ್ನಾಗಿ ಪರಿವರ್ತಿಸಿ ಸದರಿ ಸಂದೇಶವನ್ನು ಅಭೇದ್ಯವನ್ನಾಗಿ ಸಾಗಿಸಿ ಸುರಕ್ಷಿತವಾಗಿ ಸ್ವೀಕೃತವಾಗುವಂತೆ ಜಾರಿ ಮಾಡುವ ವ್ಯವಸ್ಥೆಯನ್ನು ಹೊಂದಿದೆ.

ಆದುದರಿಂದ ಇಲಾಖೆಯ ಎಲ್ಲಾ ಯುಕ್ತ ಅಧಿಕಾರಿಗಳು ಸರ್ಕಾರದಿಂದ ನೀಡಲ್ಪಟ್ಟ ಅಧಿಕೃತ ಇ–ಮೇಲ್ (ಮಿಂಚಂಚೆ) ವಿಳಾಸವನ್ನು ಮಾತ್ರ ಉಪಯೋಗಿಸಿ ಸೂಚನಾ ಪತ್ರ, ತಿಳಿವಳಿಕೆ, ಸಮನ್ಸ್, ಆದೇಶ, ಯಾವುದೇ ನಿರ್ಣಯಗಳನ್ನು ಕರದಾತರಿಗೆ ಜಾರಿ ಮಾಡತಕ್ಕದ್ದು, ಯಾವುದೇ ಕಾರಣಕ್ಕಾಗಿ ಅಧಿಕೃತ ಇ–ಮೇಲ್ (ಮಿಂಚಂಚೆ) ಅನ್ನು ಹೊರತುಪಡಿಸಿ ವೈಯಕ್ತಿಕ ಇ–ಮೇಲ್ (ಮಿಂಚಂಚೆ) ಗಳಿಂದ ಕರದಾತರೊಂದಿಗೆ ಸಂವಹನವನ್ನು ಹೊಂದತಕ್ಕದ್ದಲ್ಲ.

ಇಲಾಖೆಯ ಇತರೆ ಕಛೇರಿ ಅಧಿಕಾರಿಗಳೊಂದಿಗೆ, ಶಾಖಾಧಿಕಾರಿಗಳೊಂದಿಗೆ ಸಂಪರ್ಕವನ್ನು ಹೊಂದುವಾಗ ಸಹಿತ ಸರ್ಕಾರದಿಂದ ನೀಡಲ್ಪಟ್ಟ ಅಧಿಕೃತ ಇ–ಮೇಲ್ (ಮಿಂಚಂಚೆ) ವಿಳಾಸವನ್ನು ಮಾತ್ರ ಉಪಯೋಗಿಸಿ ಸಂಪರ್ಕ ಹೊಂದಲು

ಸೂಚಿಸಲಾಗಿದೆ. ಮುಂದುವರೆದು, ಸರ್ಕಾರದ ಇತರೆ ಕಛೇರಿ, ಭಾರತ ಸರ್ಕಾರದ ಕಛೇರಿಗಳು ಅಥವಾ ಇತರೆ ರಾಜ್ಯಸರ್ಕಾರದ ಕಛೇರಿಗಳಿಗೂ ಸಹಿತ ಸಂಪರ್ಕ ಕಲ್ಪಿಸಲು ಅಧಿಕೃತ ಇ–ಮೇಲ್ (ಮಿಂಚಂಚೆ) ಮಾತ್ರ ಉಪಯೋಗಿಸತಕ್ಕದ್ದು.

ಸರ್ಕಾರದಿಂದ ನೀಡಲ್ಪಟ್ಟ ಅಧಿಕೃತ ಇ–ಮೇಲ್ (ಮಿಂಚಂಚೆ) ಗಳು ಈ ಕೆಳಕಂಡ ಡೊಮೈನ್ (domain) ಗಳನ್ನು ಹೊಂದಿರುತ್ತದೆ:

(1) @ nic.in

(2) @ gov.in

(3) @ ka.gov.in

(4) @ kar.gov.in

ಇಲಾಖೆಯಿಂದ ನೀಡಲ್ಪಟ್ಟ ಅಧಿಕಾರಿಗಳ / ಹುದ್ದೆಗಳ ಇ–ಮೇಲ್ (ಮಿಂಚಂಚೆ) ವಿಳಾಸಗಳನ್ನು ಇಲಾಖೆಯ ಜಾಲತಾಣ www.gst.kar.nic.in ದಲ್ಲಿ ಪ್ರಕಟಪಡಿಸಲಾಗುವುದು.

ಇಲಾಖೆಯ ಎಲ್ಲಾ ಅಧಿಕಾರಿಗಳು ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

(ಶ್ರೀಕರ್ ಎಂ.ಎಸ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ಗೆ:
ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ.